# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 338**
**ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 13.08.2025**
**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅನಧಿಕೃತ ಪೆಟ್‌ಶಾಪ್‌ಗಳು, ಕ್ಲಿನಿಕ್‌ಗಳು ಹೆಚ್ಚಾಗಿದ್ದು, ಚಿಕಿತ್ಸೆ ಹೆಸರಿನಲ್ಲಿ ಹೆಚ್ಚು ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಆ) | ಬಂದಿದ್ದಲ್ಲಿ ಈ ಪೆಟ್‌ಶಾಪ್‌ಗಳು, ಹಾಗೂ ಕ್ಲಿನಿಕ್‌ಗಳ ನಿಯಂತ್ರಣ ಯಾರ ವ್ಯಾಪ್ತಿಗೆ ಬರುತ್ತದೆ; | Prevention of Cruelty to Animal (pet Shop) Rules 2018 ರನ್ವಯ ಪೆಟ್‌ಶಾಪ್‌ಗಳು ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯ ನೋಂದಣಿ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ನೊಂದಣಿ ಅಧಿಕಾರವನ್ನು ಜಿಲ್ಲಾ ಎಸ್‌ಪಿಸಿಎ (Society for Animal) Prevention of Cruelty to Rules ಪ್ರತ್ಯಾಯೋಜಿಸಲಾಗಿದ್ದು, ಪೆಟ್ ಶಾಪ್‌ಗಳನ್ನು ಪ್ರಾರಂಭಿಸುವವರು ಸಂಬಂಧಪಟ್ಟ ಜಿಲ್ಲಾ ಎಸ್.ಪಿ.ಸಿ.ಎ ಯಡಿ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ.<br><br>ಟ್ರೇಡ್ ಲೈಸೆನ್ಸ್ ಅನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆದು ಪೆಟ್ ಶಾಪ್‌ಗಳನ್ನು ಸ್ಥಾಪನೆ ಮಾಡಬಹುದಾಗಿರುತ್ತದೆ.<br><br>ಕರ್ನಾಟಕ ಪಶುವೈದ್ಯಕೀಯ ಪರಿಷತ್ (ಕೆವಿಸಿ) ನಲ್ಲಿ ನೋಂದಣಿ ಮಾಡಿಕೊಂಡ ಪಶುವೈದ್ಯ ಪದವೀಧರರು ಬಿ.ಬಿ.ಎಂ.ಪಿ/ಸ್ಥಳೀಯ ಸಂಸ್ಥೆಗಳಿಂದ ಟ್ರೇಡ್ ಲೈಸೆನ್ಸ್ ಪಡೆದುಕೊಂಡು ಖಾಸಗಿಯಾಗಿ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಬಹುದಾಗಿರುತ್ತದೆ. |
| ಇ) | ಚಿಕಿತ್ಸೆ ಹೆಸರಿನಲ್ಲಿ ಬೇಕಾಬಿಟ್ಟಿ ಹಣ ವಸೂಲಿ ಮಾಡುವುದಕ್ಕೆ ಕಡಿವಾಣ ಹಾಕಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ? | ಪಶುವೈದ್ಯಕೀಯ ಪದವೀಧರರು ಕರ್ನಾಟಕ ಪಶುವೈದ್ಯಕೀಯ ಪರಿಷತ್ (ಕೆವಿಸಿ) ನಲ್ಲಿ ನೊಂದಾಯಿಸಿಕೊಂಡು ರಾಜ್ಯದಲ್ಲಿ ಪ್ರಾಣಿಗಳಿಗೆ ಚಿಕಿತ್ಸೆ ನೀಡಬೇಕಾಗಿರುತ್ತದೆ.<br><br>ಅಗತ್ಯ ಚಿಕಿತ್ಸೆಯನ್ನು ನೀಡುವಲ್ಲಿ ಸಮಸ್ಯೆ/ ನ್ಯೂನತೆ (ಉದಾ: ಜಾನುವಾರುವಿನ ರೋಗ ಪತ್ತೆ ಮಾಡುವಲ್ಲಿ ಹಾಗೂ ಪತ್ತೆ ಮಾಡಿದ ರೋಗಕ್ಕನುಗುಣವಾಗಿ ಚಿಕಿತ್ಸೆ ನೀಡುವಲ್ಲಿ ತಪ್ಪು ಮಾಡುವುದು) ಉಂಟಾದ ಪ್ರಕರಣಗಳಲ್ಲಿ ಮಾತ್ರ ಕೆ.ವಿ.ಸಿ ಕಾಯ್ದೆಯ ನಿಯಮಗಳ ಅನುಸಾರ ಕ್ರಮವಹಿಸಲಾಗುತ್ತದೆ. |

| ಕ್ರ.ಸಂ | ದಾಖಲಾದ ಪ್ರಕರಣಗಳ ಸಂಖ್ಯೆ | ವಿಚಾರಣೆ ಕೈಗೊಂಡ ಪ್ರಕರಣಗಳ ಸಂಖ್ಯೆ |
|---|---|---|
| 2021-22 | 02 | 02 |
| 2022-23 | 06 | 06 |
| 2023-24 | 05 | 05 |

**ಸಂಖ್ಯೆ:ಪಸಂಮೀ 172 ಸಲೆವಿ 2025**

(ಕೆ. ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು